◆ **ಕವಿಯಾಗಿ ನೀವು ನಮಗೆ ಪರಿಚಿತರು. ಈ ಕವಿ ರೂಪುಗೊಂಡಿದ್ದು ಹೇಗೆ? ಕುಟುಂಬದಲ್ಲಿ, ಊರಿನಲ್ಲಿ ಸಾಹಿತ್ಯದ ವಾತಾವರಣವಿತ್ತೇ?**

ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಹೋದಿಗೆರೆ ಎನ್ನುವ ಸಣ್ಣ ಹಳ್ಳಿ ನನ್ನೂರು. ಜೂನ್ 23, 1944ರಲ್ಲಿ ನಾನು ಹುಟ್ಟಿದ್ದು. ನಾನು ಹುಟ್ಟೋ ಮೊದಲೆ, ನನ್ನ ತಾಯಿ ಗರ್ಭಿಣಿ ಇರುವಾಗಲೇ, ನನ್ನ ತಂದೆ ತೀರಿಕೊಂಡುಬಿಟ್ಟರು. ಮನೇಲಿ ತುಂಬಾ ಬಡತನ. ಆ ಹಳ್ಳೀಲಿ ಒಂದೆರಡು ಶ್ರೀಮಂತರ ಮನೆಗಳಿದ್ದರೂ, ಉಳಿದವರೆಲ್ಲ ಬಡವರೇ. ಊಟಕ್ಕೂ ತತ್ವಾರ. ಬೆಳಗ್ಗೆ ಎದ್ದರೆ ಏನು, ರಾತ್ರಿ ಆದ್ರೆ ಏನು ಎನ್ನುವ ಪರಿಸ್ಥಿತೀಲಿ ಬೆಳೆದಿದ್ದು ನಾನು.

ನಮ್ಮೂರಿನಲ್ಲಿ ಎಲ್ಲ ಧರ್ಮದ, ಎಲ್ಲ ಜಾತಿಯ ಜನ ಇದ್ದರು; ಕ್ರಿಶ್ಚಿಯನ್ಸ್, ಹಿಂದೂ, ಮುಸ್ಲಿಮರು. ಹಿಂದೂಗಳಲ್ಲಿ ಬೇರೆ ಬೇರೆ ಕೇರಿಗಳು ಇದ್ದವು. ನಮ್ಮ ಸುತ್ತಮುತ್ತಲೂ ಬೇರೆ ಬೇರೆ ಜಾತಿಗಳವರು ಇದ್ದುದರಿಂದ ಬಾಲ್ಯದಲ್ಲಿ ಜಾತಿಭೇದ ಗಣನೆಗೇ ಬರಲಿಲ್ಲ. ಬಡತನದ ನಡುವೆಯೂ ತುಂಬಾ ಸಂತೋಷದಿಂದ ಇದ್ದೆವು. ಪಕ್ಕಾ ಕಲ್ಚರಲ್ ಆದಂತಹ ಒಂದು ವಾತಾವರಣ ನಮ್ಮೂರಲ್ಲಿತ್ತು. ಹೆಚ್ಚು ಜನ ಓದ್ತಾ ಇದ್ದರು. ಬಹುತೇಕರು ತಮ್ಮ ಮನೆಗಳಲ್ಲಿ ಪುಸ್ತಕಗಳನ್ನಿಟ್ಟುಕೊಂಡಿದ್ದರು. ಕುಮಾರವ್ಯಾಸ, ಲಕ್ಷ್ಮೀಶ, ಬಸವಪುರಾಣ ಓದುವವರಿದ್ದರು. ನಮ್ಮೂರಿನ ಪಕ್ಕದಲ್ಲಿ ಗಂಗೂರು ಅಂತ ಒಂದು ಹಳ್ಳಿ. ಅಲ್ಲಿ ಯಕ್ಷಗಾನ ಸಂಪ್ರದಾಯದ ಗೊಂಬೆಮೇಳದ ಕಲಾವಿದರ ಮನೆತನ ಇತ್ತು. ಅವರಿಗೆ ಬೊಂಬೆ ಕುಣಿಸೋ ಕಲೆ ವಂಶ ಪಾರಂಪರ್ಯದಿಂದ ಬಂದಿದ್ದು. ಅವರು ತಾವು ಕುಣಿಯುತ್ತಿರಲಿಲ್ಲ. ಬೊಂಬೆಗಳನ್ನು ಕುಣಿಸೋರು. ಒಂದೊಂದು ಗೊಂಬೆ ಎರಡು ಎರಡೂವರೆ ಅಡಿ ಇರ್‍ತಿತ್ತು. ಸೂತ್ರದ ಗೊಂಬೆಗಳವು. ಚೆನ್ನಾಗಿ ಅಲಂಕಾರ ಮಾಡಿರೋರು. ಪರದೆಯ ಹಿಂದೆ ಬೊಂಬೆ ಕುಣಿಸೋ ಕಲಾವಿದರು ಇರುತ್ತಿದ್ದರು, ಪಕ್ಕದಲ್ಲಿ ಭಾಗವತರು, ಇನ್ನೊಂದು ಭಾಗದಲ್ಲಿ ಚಂಡೆ. ಪಾರ್ತಿಸುಬ್ಬ, ರಾಮಾಯಣ, ಮಹಾಭಾರತ, ಭಾಗವತದ ಯಕ್ಷಗಾನದ ಪ್ರಸಂಗಗಳು ಇಡೀರಾತ್ರಿ ನಡೆಯುತ್ತಿದ್ದವು. ಬೊಂಬೆಮೇಳ ಬರುತ್ತೆ ಅಂದರೆ ನಮಗೆಲ್ಲ ಸಂತೋಷವೋ ಸಂತೋಷ. ಗಂಗೂರಿನಿಂದ ಎರಡು ಬಂಡಿ ಬರುತ್ತಿದ್ದವು. ಒಂದು ಬಂಡಿ ಪಾಂಡವರದು. ಇನ್ನೊಂದು ಬಂಡಿ ಕೌರವರದು. ಮೊದಲೆಲ್ಲ ಒಂದೇ ಬಂಡಿಯಲ್ಲಿ ಬೊಂಬೆಗಳನ್ನು ಇಡುತ್ತಿದ್ದರಂತೆ. ಆದರೆ, ರಾತ್ರಿಯೆಲ್ಲ ಪೆಟ್ಟಿಗೆಯೊಳಗಿನ ಬೊಂಬೆಗಳ ನಡುವೆ ಜಗಳ ನಡೆಯುತ್ತಿತ್ತಂತೆ. ಬೊಂಬೆಗಳು ಕೈಕಾಲು ಮುರಿದುಕೊಂಡರೆ ಕಷ್ಟ ಎಂದು ಪಾಂಡವರು ಕೌರವರನ್ನು ಬೇರೆ ಬೇರೆ ಇಡಲು ನಿರ್ಧಾರ ಮಾಡಿದರಂತೆ. ಊರಲ್ಲಿ ಈಶ್ವರನ ಗುಡಿಯಿತ್ತು. ಊರ ಹೊರಗಿನ ಕಣದಲ್ಲಿ ರೌಂಡು ಕಲ್ಲುಗಳಿರುತ್ತಿದ್ದವು. ಆ ಕಲ್ಲುಗಳನ್ನು ಉರುಳಿಸಿಕೊಂಡು ಗುಡಿ ಬಳಿಗೆ ಬಂದರು ಎಂದರೆ ಅವತ್ತು ಆಟ ಇದೆ ಎಂದರ್ಥ. ನಾಲ್ಕು ರೌಂಡುಕಲ್ಲುಗಳ ಮೇಲೆ ದಬ್ಬೆಗಳನ್ನು ಹಾಕಿ ಅಟ್ಟ ನಿರ್ಮಿಸುತ್ತಿದ್ದರು. ರಾತ್ರಿ ಆಯಿತು ಎಂದರೆ ಇಡೀ ಊರೇ ಅಲ್ಲಿ ಸೇರಿ ಗಿಜಿಗಿಜಿ ಎನ್ನುತ್ತಿತ್ತು. ರಾತ್ರಿ ನಾಡಿಗರ ಮನೆಯಲ್ಲಿ ಕಡಾಯಿ ತುಂಬಾ ಕಾಫಿ. ಕಲಾವಿದರಿಗೆ ನಿದ್ದೆ ಬರಬಾರದೆಂದು ರಾತ್ರಿಯಿಡೀ ಕಾಫಿಯ ಸರಬರಾಜು. ಮೇಳದವರು ಊರಿನ ಸ್ಥಿತಿವಂತರ ಮನೆಗೆ ಹೋಗಿ, 'ನಮ್ಮ ದ್ರೌಪದಿಗೆ ಉಡಿಸಲಿಕ್ಕೆ ಸೀರೆ ಬೇಕು' ಎಂದು ಸೀರೆಗಳನ್ನು ಕೇಳಿ ತರುತ್ತಿದ್ದರು. ಅವುಗಳನ್ನು ಬೊಂಬೆಗಳಿಗೆ ಉಡಿಸಿ, ಆಟ ಮುಗಿದ ಮೇಲೆ ವಾಪಸ್ಸು ಕೊಡುತ್ತಿದ್ದರು. ರಾತ್ರಿ ಹತ್ತು ಗಂಟೆಗೆ ಮೇಳ ಶುರುವಾದರೆ ಇಡೀ ರಾತ್ರಿ ನಡೆಯೋದು. ಕೆಲವು ಮನೆಯವರು ತಮ್ಮ ಮನೆ ಜಗಲಿ ಮೇಲೆ ನೀರು ಹಾಕುತ್ತಿದ್ದರು, ಅಲ್ಲಿ ಯಾರೂ ಕೂರದಿರಲಿ ಎಂದು. ಇಡೀ ರಾತ್ರಿ ಕನಸಿನಂತೆ ಕಳೆದುಹೋಗೋದು. ರಾಮಾಯಣ, ಮಹಾಭಾರತ, ಭಾಗವತಗಳು ಜೀವಂತ ಅನುಭವಗಳಾಗಿ ನನ್ನ ಮನಸ್ಸನ್ನು ಹೊಕ್ಕಿದ್ದು ಹೀಗೆ. ಮುಂದೆ ನನ್ನ ಕಾವ್ಯದಲ್ಲಿ ಇವೆಲ್ಲ ಯಾಕೆ ಪ್ರಧಾನ ರೂಪಕಗಳಾದವು ಎಂದರೆ, ಅವೆಲ್ಲ ಚಿಕ್ಕಂದಿನಿಂದಲೇ ನನ್ನ ಮನಸ್ಸಿಗೆ